## ಮಗು ಅಳುತಾ ಇದೆ...

‘ನಿಮ್ಮೊಡನೆ’ ಪುಟದಲ್ಲಿನ ರಘುನಾಥ ಚ.ಹ. ಅವರ ‘ಎಲ್ಲೋ ಮಗು ಅಳತಾ ಇದೆ ಒಂದೇ ಸಮನೆ’ ಲೇಖನ, ಬಡತನ ಹಾಗೂ ಪರಿಸ್ಥಿತಿಯ ಒತ್ತಡದಿಂದಾಗಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳ ಕುರಿತು ಮನ ಮಿಡಿಯುವಂತೆ ಮಾಡಿತು.

—ಸರಸ್ವತಿ ಭೋಸಲೆ, ಧಾರವಾಡ

ಕೊರೊನಾ ಸಂಕಷ್ಟದ ಕಾಲದಲ್ಲಿ ಸಮಾಜದ ‘ಕೆಟ್ಟ ವ್ಯವಸ್ಥೆ’ಗಳ ಅಪರಿಚಿತ ಮುಖಗಳು ಅನಾವರಣಗೊಳ್ಳುತ್ತಿವೆ. ಇದನ್ನು ಲೇಖಿನ ಚೆನ್ನಾಗಿ ವಿವರಿಸಿದೆ. ಭಿಕ್ಷಾಟನೆಯ ನೆಪದಲ್ಲಿ ಇದರ ಹಿಂದೆ ಇರುವ ಕಾಣದ ಕೈಗಳು ಲಾಭ ಪಡೆಯುತ್ತಿರುವುದು ದುರದೃಷ್ಟಕರ.

—ಎಚ್. ಸಿದ್ದಾರ್ಥ ಹೆಬ್ಬಾರ್, ಉಡುಪಿ

ಬಡಮಕ್ಕಳಿಗೆ ಸರ್ಕಾರ ಸಹಾಯ ಮಾಡಬೇಕು. ಇಲ್ಲದಿದ್ದರೆ ಬಡ ಮಕ್ಕಳು ಭಿಕ್ಷೆ, ವೇಶ್ಯಾವಾಟಿಗೆಗೆ ಬಳಕೆಯಾಗುವುದು ನಿಲ್ಲದು.

—ಬಿ.ಎಸ್. ಮುಳ್ಳೂರ, ಹಲಗತ್ತಿ

## ರಾಜ್ ಸವಿನೆನಪು

ನಂಜನಗೂಡು ಎಂ. ಪ್ರಕಾಶ್ ಅವರ ಬರೆದಿರುವ ‘ರಾಜ್ ಒಲವಿನ ನಂಜನಗೂಡು’ (ಪು. 29) ಲೇಖನ ಚೆನ್ನಾಗಿತ್ತು. ರಾಜ್‌ಕುಮಾರ್ ಅವರ ಬಗ್ಗೆ ಬರೆದ ಚಿಕ್ಕ ಚಿಕ್ಕ ವಿಷಯಗಳು ಚೆನ್ನಾಗಿವೆ.

—ಶಿವಕುಮಾರ್ ಎ.ಎಂ.

## ಕ್ಯಾಟರಾಕ್ಟ್: ಉತ್ತಮ ಮಾಹಿತಿ

ಉಮಾ ಅನಂತ್ ಅವರ ‘ಕ್ಯಾಟರಾಕ್ಟ್ ಕಣ್ಣಿಗೆ ಸರ್ಜರಿ’ ಲೇಖನ (ಮೇ 6) ತುಂಬ ಉಪಯುಕ್ತವಾಗಿತ್ತು. ಮಕ್ಕಳಲ್ಲಿ ಅನುವಂಶೀಯವಾಗಿ ಕಣ್ಣುಗಳಿಗೆ ಕ್ಯಾಟರಾಕ್ಟ್ ಬರುವ ಸಾಧ್ಯತೆ ಇರುತ್ತದೆ. ಕಣ್ಣುಗಳ ಪೊರೆ ತೆಗೆಯುವ ಶಸ್ತ್ರ ಚಿಕಿತ್ಸೆಯಿಂದ ಸಂಪೂರ್ಣ ಗುಣಮುಖರಾಗಬಹುದು.

—ವಿ. ಹೇಮಂತ ಕುಮಾರ್, ಬೆಂಗಳೂರು

## ಗುರುವೇ ನಿನ್ನ ಪಾದಕೆ...



ಸಂತೇಬೆನ್ನೂರು ಫೈಜ್ನಟ್ರಾಜ್ ಅವರ ಪ್ರಬಂಧ ‘ಗುರುವೇ ನಿನ್ನ ಪಾದಕೆ...’ ಓದಿದೆ. ಅವ್ಯಕ್ತ ಭಯದಿಂದ ಶಾಲೆಗೆ ಹೋಗುವುದಿಲ್ಲ ಎಂಬ ನನ್ನ ಮನಸ್ಸನ್ನು ಶಾಲೆಯತ್ತ ತರಲು, ಪ್ರೌಢಶಾಲೆಯ ಶಿಕ್ಷಕ ವೃಂದವೇ ನನ್ನ ಮನೆಗೆ ಬಂದಿತ್ತು. ಈ ಪ್ರಬಂಧ ಓದಿ, ಶಿಷ್ಯವತ್ಸಲರಾದ ಅಂದಿನ ಶಿಕ್ಷಕರಿಗೂ, ಕಾಟಾಚಾರಕ್ಕೆ ಶಿಕ್ಷಕವೃತ್ತಿಯನ್ನು (ಕೆಲವೇ) ಕೈಗೊಂಡ ಇಂದಿನ ಶಿಕ್ಷಕರಿಗೂ ಎಲ್ಲಿಯ ಹೋಲಿಕೆ?

—ವಿ. ಮಾಧವ ಶ್ಯಾನುಭಾಗ್, ಕುಂದಾಪುರ

ತುಂಬಾ ಸುಂದರವಾದ ಪ್ರಬಂಧ. ಬಾಲ್ಯವನ್ನು ಕಣ್ಣ ಮುಂದೆ ತಂದಿತು. ಆಗಿನ ಗುರುಗಳು ನಿಜಕ್ಕೂ ತುಂಬಾ ಪ್ರೀತಿಯಿಂದ ಪಾಠ ಮಾಡುತ್ತಿದ್ದರು. ಅವರಿಂದಲೇ ನಾವು ನಮ್ಮ ಗುರಿ ತಲುಪಲು ಸಾಧ್ಯವಾಗಿದ್ದು. ಇಂದಿಗೂ ನಮಗೆ ನಮ್ಮ ಗುರುಗಳ ಮೇಲೆ ಅದೇ ಗೌರವ ಮತ್ತು ಭಕ್ತಿ. ನಮ್ಮ ಮಕ್ಕಳು ಇದನ್ನೆಲ್ಲ ಮಿಸ್ ಮಾಡಿಕೊಳ್ಳುತ್ತಿದ್ದಾರೆ.

—ಶಬ್ನಮ್ ಎಸ್. ದಾವಣಗೆರೆ

ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ನಮಗೆ ಕೇವಲ ಶಿಕ್ಷಕಿಯರೇ ಇದ್ದರು. ಹೈಸ್ಕೂಲ್ ತನಕ ನಾವು ಮೇಷ್ಟ್ರುಗಳನ್ನು ನೋಡೇ ಇರಲಿಲ್ಲ! ನಮ್ಮ ಶಾಲೆಯ ಲೋಬೋ ಟೀಚರ್, ಆರತಿ ಆನವಟ್ಟಿ ಟೀಚರ್, ಮನೋರಮಾ ಟೀಚರ್, ನನ್ನ ಮೆಚ್ಚಿನ ಸರಳ ಟೀಚರ್ ಇಂದಿಗೂ ನನ್ನ ಮನಸ್ಸಿನಲ್ಲಿ ನೆಲೆಸಿದ್ದಾರೆ. ಲೋಬೋ ಟೀಚರ್ ಸೀರೆ ಮೇಲೆ ಒಮ್ಮೆ ಪೆನ್ನಿನಿಂದ ಇಂಕ್ ಹಾರಿಸಿ ಸರಿಯಾಗಿ ಬಾರಿಸಿಕೊಂಡಿದ್ದೆ.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

ಪ್ರಬಂಧಕ್ಕೆ ಬರೆದಿರುವ ವ್ಯಂಗ್ಯಚಿತ್ರ ಸೊಗಸಾಗಿತ್ತು .ಇದರಿಂದಾಗಿ ಸುಧಾ ಇನ್ನಷ್ಟು ಓದುಗರನ್ನು ಆಕರ್ಷಿಸಲುಯ ಸಾಧ್ಯವಾಗಿದೆ.

—ಶ್ರೀಧರ್, ಚನ್ನಪಟ್ಟಣ

## ಕೇದಾರಕಂಠದ ಸುಂದರ ಚಾರಣ



ನಟರಾಜ್ ಬೂದಾಳ್ ಅವರ ‘ಕೇದಾರಕಂಠ’ ಚಾರಣ ಕಥನ (ಮೇ 6) ಓದಿ ಹಿಮಾಲಯದ ಗಿರಿಶಿಖರಗಳಲ್ಲಿ ಅವರೊಂದಿಗೆ ನಾನೂ ಪಯಣಿಸಿದಂತಹ ಅನುಭವವಾಯ್ತು. ಸರಳ, ಸಹಜ ನಿರ್ಗಳ, ನಿರೂಪಣ ಶೈಲಿ, ಹಿಮಾಲಯದ ಮಡಿಲಲ್ಲಿನ ರುದ್ರರಮಣೀಯ ದೃಶ್ಯಗಳ ಸೌಂದರ್ಯವನ್ನು ಕಣ್ಮನಗಳಲ್ಲಿ ತುಂಬಿಸಿತು. “ಹಿಮಾಲಯವೆಂದರೆ ಅತ್ಯಂತ ಸರಳ, ನಿರಾಳ, ನಿಚ್ಚಳ ಮತ್ತು ಅರ್ಪಿಸಿಕೊಂಡವರಿಗೆ ತಾಯಿಮಡಿಲು” ಎಂಬ ನುಡಿಗಳನ್ನು ಓದಿ ಅಂತಹ ರಮಣೀಯ ನಿಸರ್ಗದ ಮಡಿಲಲ್ಲಿ ವಾಸಿಸುವವರೇ ಧನ್ಯರೆನಿಸಿತು.

—ಜಿ.ಕೆ. ಕಂಚೀವರದಯ್ಯ, ಬೆಂಗಳೂರು

ಕೇದಾರಕಂಠ ಚಾರಣ ಕಥನ ತುಂಬಾ ಹಿಡಿಸಿತು. ಸುಲಲಿತ, ಮಧ್ಯೆ ಮಧ್ಯೆ ಹಾಸ್ಯಲೇಪಿತ, ಸುಂದರ ಅನುಭವ ಪ್ರಬಂಧ ಓದಿಸಿಕೊಂಡು ಹೋಗುತ್ತದೆ. ಪೂರಕವಾದ ಚಿತ್ರಗಳು ಸಹ ಚೆನ್ನಾಗಿವೆ.

—ಕೆ. ಮೋಹನದಾಸ ರಾವ್, ಬೆಂಗಳೂರು

ಚಾರಣ ಕಥನ ತುಂಬ ವಿಶೇಷವಾಗಿತ್ತು. ನಾವೇ ಚಾರಣಿಗರೇನೋ ಎಂದೆನಿಸುತ್ತಿತ್ತು.

—ಅನಿತಾ, ಮೈಸೂರು

ನಾವು ಎರಡು ವರ್ಷಗಳ ಹಿಂದೆ 20 ದಿನಗಳ ಯುರೋಪ್ ಮತ್ತು ಸ್ವಿಟ್ಜರ್‌ಲೆಂಡ್ ಪ್ರವಾಸ ಕೈಗೊಂಡಿದ್ದೆವು. ಸ್ವಿಟ್ಜರ್‌ಲೆಂಡ್‌ನ ಹಿಮದ ಬೆಟ್ಟಗಳು ನಮ್ಮ ಹಿಮಾಲಯದ ಬೆಟ್ಟಗಳಿಗೆ ಯಾವುದೇ ರೀತಿಯಿಂದಲೂ ಸರಿಸಾಟಿಯಲ್ಲ. ಪ್ರವಾಸವೇ ಬೇರೆ, ಚಾರಣವೇ ಬೇರೆ ಎನ್ನುವುದನ್ನು ನಟರಾಜ ಬೂದಾಳು ಅವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. 3 ಲಕ್ಷ ರೂಪಾಯಿ ಕೊಟ್ಟು ಯುರೋಪ್ ಪ್ರವಾಸ ಮಾಡುವ ಬದಲು, ನಮ್ಮ ಕೇರಳದಿಂದ ಹೊರಟು ಕಾಶ್ಮೀರದವರೆಗೆ ಪ್ರವಾಸ ಮಾಡಿ ಹಾಗೆ ಉತ್ತರಾಖಂಡದ ಕೇದಾರಕಂಠ ಚಾರಣ ಮಾಡಿದರೆ ಯಾವ ಯುರೋಪು ಬೇಕಾಗಿಲ್ಲ. ಹೃಷಿಕೇಶದವರೆಗೆ ಹೋಗಿರುವ ನನಗೆ ಈ ಲೇಖನ ಓದಿದ ಮೇಲೆ ಕೇದಾರಕಂಠದ ಚಾರಣ ಮಾಡುವ ಉತ್ಕಟತೆ ಉಂಟಾಗಿದೆ.

—ಬಿ. ಗೋಪಾಲ್ ಸಿಂಗ್, ಮೈಸೂರು

## ಭ್ರಮೆಯ ಬೆನ್ನಟ್ಟಿ...

ಡಾ. ಪವಿತ್ರಾ ಅವರ ‘ಭ್ರಮೆಯ ಬೆನ್ನಟ್ಟಿ..’ (ಪು. 22) ಕಣ್ಣು ತೆರೆಸುವ ಅದ್ಭುತ ಲೇಖನ. ‘ಲಾಕ್ ಡೌನ್’ ಸಂದರ್ಭಕ್ಕೆ ಈ ಲೇಖನ ಸೂಕ್ತವಾಗಿದೆ.

—ರಾಜೀವ್ ಎನ್. ಮಾಗಲ್, ಹಾಸನ ಜಿಲ್ಲೆ

## ಹನಿಗವನ ಪ್ರಕಟಿಸಿ

ಸುಧಾ ವಾರಪತ್ರಿಕೆಯಲ್ಲಿ ಇತ್ತೀಚೆಗೆ ಹನಿಗವನಗಳು ಪ್ರಕಟವಾತ್ತಿಲ್ಲ. ದಯಮಾಡಿ ಹನಿಗವನಗಳನ್ನು ಪ್ರಕಟಿಸಿ.

—ಬೂಕನಕೆರೆ ವಿಜೇಂದ್ರ, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in